ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ಸಮಯದಲ್ಲಿ ಸನ್ಮಾನ್ಯ ಸಾರಿಗೆ ಸಚಿವರು ಒಂದು ಭರವಸೆಯನ್ನು ಕೊಡಬೇಕಾಗುತ್ತದೆ. ಸಾರಿಗೆ ಸಂಸ್ಥೆಯ ಆಡಳಿತ ಮಂಡಳಿಯವರು, ಇ.ಪಿ.ಕೆ.ಎಂ. (ಅರ್ನಿಂಗ್ ಪರ್ ಕಿಲೋಮೀಟರ್) ರೂ. 9.40ಕ್ಕಿಂತ ಕಡಿಮೆ ಇರತಕ್ಕಂಥ ಎಲ್ಲ ರೂಟುಗಳನ್ನು ಕ್ಯಾನ್ಸಲ್ ಮಾಡಬೇಕು ಎನ್ನುವ ತೀರ್ಮಾನೆವನ್ನು ತೆಗೆದುಕೊಂಡಿದ್ದಾರೆ. ಈ ಬಗ್ಗೆ ಸುತ್ತೋಲೆ ಸಹ ಹೋಗಿದೆ. ಡಿವಿಷನಲ್ ಕಂಟ್ರೋಲರ್‌ಗಳು ತಿಳುವಳಿಕೆ ಕೊಟ್ಟಿದ್ದಾರೆ. ಆದ್ದರಿಂದಾಗಿ, ಎಫಿಷಿಯೆನ್ಸಿ ಜಾಸ್ತಿಯಾಗಬೇಕು ಎಂದು ಕ್ಯಾನ್ಸಲ್ ಮಾಡಿದ್ದಾರೆ. ಹಳ್ಳಿಗಳಿಗೆ ಹೋಗತಕ್ಕಂಥ ಬಸ್ಸುಗಳ ಇ.ಪಿ.ಕೆ.ಎಂ. ಒಂಬತ್ತು ರೂಪಾಯಿ ಬರಲು ಸಾಧ್ಯವಿಲ್ಲ. ಆದ್ದರಿಂದ ಅಂಥ ಕಡೆಗಳಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲದ ಒಂದು ಟ್ರಿಪ್ ಆದರೂ ಓಡಿಸಬೇಕು. ಏಕೆಂದರೆ ತಾವು ವಿದ್ಯಾರ್ಥಿಗಳಿಗೆ ಪಾಸ್‌ಗಳನ್ನು ಕೊಟ್ಟುಬಿಟ್ಟಿದ್ದೀರಿ. ಅವರು ಹೋಗಿ ಬರಬೇಕಾಗುತ್ತದೆ. ಜೊತೆಗೆ ರೈತರೂ ಸಹ ಬರಬೇಕಾಗುತ್ತದೆ. ಮಧ್ಯಾಹ್ನದ ಟ್ರಿಪ್‌ಗಳನ್ನು ಕ್ಯಾನ್ಸಲ್ ಮಾಡಿದರೂ ಪರವಾಗಿಲ್ಲ, ಬೆಳಿಗ್ಗೆ ಮತ್ತು ಸಾಯಂಕಾಲದ ಟ್ರಿಪ್‌ಗಳನ್ನು ಓಡಿಸಲು ಅನುಕೂಲವಾಗುವಂತೆ, ದಯವಿಟ್ಟು ಆ ಸುತ್ತೋಲೆಯನ್ನು ಮಾಡಿಫೈ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸಿಂಧ್ಯಾರವರ ಸಲಹೆಯ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಬಸ್ಸುಗಳನ್ನು ನಿಲ್ಲಿಸುವಂಥ ವಿಚಾರ ಏಕೆ ಬಂದಿದೆ ಎನ್ನುವುದು ಅವರಿಗೂ ಗೊತ್ತಿದೆ. ಪ್ರಯಾಣಿಕರ ಸಂಖ್ಯೆ ಬಹಳ ಕಡಿಮೆಯಾಗಿರುವುದರಿಂದ, ಅಂಥ ಕಡೆ ನಾವು ಬಸ್ಸುಗಳನ್ನು ಸಂಚಾರ ಮಾಡಿದಾಗ ನಷ್ಟ ಅನುಭವಿಸತಕ್ಕಂಥಾದ್ದು ಅವರ ಅನುಭವಕ್ಕೂ ಬಂದಿರುವ ವಿಚಾರ ಮತ್ತು ನನ್ನ ಅನುಭವಕ್ಕೂ ಬಂದಿರುವ ವಿಚಾರ. ಆದರೆ, ಅವರು ನೀಡಿರುವ ಸಲಹೆಯ ಮೇರೆಗೆ ಬೆಳಿಗ್ಗೆ ಮತ್ತು ಸಂಜೆ ಹೊತ್ತಿನಲ್ಲಿ, ಗ್ರಾಮೀಣ ಜನರ ಅಗತ್ಯತೆ ಮೇರೆಗೆ ಬಸ್ಸುಗಳ ಸಂಚಾರದ ವ್ಯವಸ್ಥೆಯನ್ನು ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 4ನೇ ಪಟ್ಟಿಯಲ್ಲಿರುವ 165 ಪ್ರಶ್ನೆಗಳ ಪೈಕಿ 98 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿನ ನೌಕರರ ವೇತನ

243 (84) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಮಾಸಿಕ ವೇತನ ಬಹಳ ಕಡಿಮೆ ಇರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ವೇತನಕ್ಕೆ ಸರಿಸಮಾನ ವೇತನವನ್ನು ಖಾಸಗಿಯವರು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೂ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಅಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಗೌರವಧನ ನೀಡುವ ಸಲುವಾಗಿ ಈ ಕೆಳಕಂಡ ದರಗಳಲ್ಲಿ ಅನುದಾನವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ನೀಡಲಾಗುತ್ತಿದೆ:

1) ವಿದ್ಯಾರ್ಥಿನಿಲಯ - ತಿಂಗಳಿಗೆ ರೂ. 125 ರಂತೆ 12 ತಿಂಗಳುಗಳು
ಮೇಲ್ವಿಚಾರಕರು

2) ಅಡಿಗೆಯವರು - ತಿಂಗಳಿಗೆ ರೂ. 100 ರಂತೆ 12 ತಿಂಗಳುಗಳು

3) ಅಡಿಗೆ ಸಹಾಯಕರು - ತಿಂಗಳಿಗೆ 75 ರಂತೆ 12 ತಿಂಗಳುಗಳು

ಆ) ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸರ್ಕಾರಿ ನೌಕರರ ವೇತನಕ್ಕೆ ಸಮನಾಗಿ ವೇತನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ರಾಜ್ಯದಲ್ಲಿ ಮುನ್ಸಿಪಾಲಿಟಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವುದು

244 (89) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ಪಟ್ಟಣ ಪಂಚಾಯತಿಗಳಿವೆ?

ಆ) ಪುರಸಭೆಗಳನ್ನಾಗಿ ಮಾರ್ಪಾಡು ಮಾಡಲು ಜನಸಂಖ್ಯೆ ಪ್ರಮಾಣ ಎಷ್ಟಿರಬೇಕು?

ಇ) ಜನಸಂಖ್ಯಾಕ್ಕನುಗುಣವಾಗಿ ಈಗಾಗಲೇ ಜನಸಂಖ್ಯೆ ಮೀರಿರುವ ಅಥವಾ ಸಮನಾಗಿರುವ ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಈ) ಈಗಾಗಲೇ ರಾಜ್ಯದಲ್ಲಿ ಎಷ್ಟು ಪಟ್ಟಣ ಪಂಚಾಯತಿಗಳನ್ನು ಪುರಸಭೆಯನ್ನಾಗಿ ಮಾರ್ಪಾಡು ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) 89

ಆ) ಕನಿಷ್ಟ 20,000 ಆದರೆ ನಗರ ಸ್ಥಳೀಯ ಸಂಸ್ಥೆಯೊಂದನ್ನು ಪುರಸಭೆಯಾಗಿ ಮಾರ್ಪಾಡಿಸುವಲ್ಲಿ ಈ ಕೆಳಕಂಡ ನಿಬಂಧನೆಗಳನ್ನು ಪೂರೈಸಬೇಕು.

1. ಜನಸಂಖ್ಯೆ ಕನಿಷ್ಟ 20,000ಕ್ಕಿಂತ ಹೆಚ್ಚು, 30,000ಕ್ಕಿಂತ ಕಡಿಮೆ ಇರಬೇಕು.